ಆದರೆ ಹೊಳೆ ಜಾಸ್ತಿ ಬಂದಾಗ ಅದು ಕೊಚ್ಚಿ ಹೋಗುತ್ತದೆಂದು ಹೇಳಿ ಅದನ್ನು ಕೈ ಬಿಡ ಲಾಯಿತು. ಅದಾದ ಬಳಿಕ ಆ ಮುನಿಸಿಪಾಲಿಟಿಯವರು ಅದರ ಪರವಾಗಿ 10 ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದರು. ಆದರೆ ಆ ಸೇತುವೆಗೆ 10–12 ಲಕ್ಷ ರೂಪಾ ಯಿಗಳು ಬೇಕಾಗಿದೆ. ಅಷ್ಟು ಸಾಲದೆಂದು ನಾವು ಆ ಮುನಿಸಿಪಾಲಿಟಿಯವರಿಗೆ ತಿಳಿಸಿದ ಮೇಲೆ ಈಗ ಅವರು ಈ ಸೇತುವೆ ಖರ್ಚಿನಲ್ಲಿ ನಾಲ್ಕನೇ ಒಂದು ಭಾಗ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಈ ಕಾರ್ಯ ಕೈಗೊಳುವ ವೇಳೆಗೆ ಈ ಅಂದಾಜಿಗಳೆಲ್ಲ ಮತ್ತೆ ಪುನರ್ವಿಮರ್ಶೆಯಾದಾಗ ಇನ್ನೂ 4–5 ಲಕ್ಷ ಮೇಲಕ್ಕೆ ಹೋಗಬಹುದು. ಮೇಲಾಗಿ ಇತ್ತೀಚೆಗೆ ಅಲ್ಲಿ ಸಕ್ಕರೆ ಕಾರ್ಖಾನೆ ಬೇರೆ ಸ್ಥಾಪನೆಯಾಗಿದೆ. ಆದರಿಂದ ಅಲ್ಲಿ ಟ್ರಾಫಿಕ್ ಜಾಸ್ತಿ ಆಗ ತಕ್ಕ ಸಂದರ್ಭವಿದೆ. ಆದ್ದರಿಂದ ಆ ಸಕ್ಕರೆ ಕಾರ್ಖಾನೆ ಫಂಡಿನಿಂದ ಏನಾದರೂ ಈ ಸೇತುವೆ ಮಾಡಲು ಸಾಧ್ಯವಿದೆಯೇ ಎಂಬುದನ್ನು ಸಹ ಸರ್ಕಾರದವರು ಆಲೋಚನೆ ಮಾಡುತ್ತಿದ್ದಾರೆ. ಹೀಗೆ ಈ ಪ್ರಶ್ನೆ ಅನೇಕ ಅಂಶಗಳನ್ನೊಳಗೊಂಡಿದೆ. ಮೇಲಾಗಿ ಈಗ ಅಲ್ಲಿರತಕ್ಕ ಸೇತುವೆ ಹಳೇದಾಗಿದ್ದರೂ ಇನ್ನೂ ಕೆಲವು ಕಾಲ ಅದು ಇರಬಹುದು. ಹೀಗೆರ್ಲಾ ಇರುವಾಗ ಇದನ್ನು ಖಂಡಿತ ಹೀಗೆ ಮಾಡಿಸಲಾಗುತ್ತೆಂತ ಸಧ್ಯದಲ್ಲಿ ತಿಳಿಸಲು ಕಷ್ಟವಿದೆ. ಆದರೆ ಸರ್ಕಾರದವರು ಈ ಪ್ರಶ್ನೆಯನ್ನು ತೀವ್ರಾನಕ್ತಿಯಿಂದ ಬೇಗ ಪರಿಶೀಲಿಸುತ್ತಾರೆಂದು ಇಷ್ಟನ್ನು ಮಾತ್ರ ಈ ಸಂದರ್ಭದಲ್ಲಿ ತಿಳಿಸಿದರೆ ಸಾಕೆಂದು ಕಾಣುತ್ತೆ.

ಶ್ರೀ ಟಿ. ಡಿ. ಸೀತಾರಾಮರಾವ್.—ಆ ಶ್ರೀ ರಾಮಣ್ಣ ಶ್ರೇಷ್ಠಿ ಪಾರ್ಕಿನ ಹತ್ತಿರ ಒಂದು ಸೇತುವೆ ಆಗಬೇಕೆಂಬ ವಿಚಾರ 3–4 ವರ್ಷಗಳಿಂದ ಸರ್ಕಾರದವರ ಗಮನಕ್ಕೆ ಪದೇ ಪದೇ ಬರುತ್ತಿದೆಯಲ್ಲವೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅಷ್ಟೇ ಏಕೆ? 5–6 ವರ್ಷ ಅಂತ ಬೇಕಾದರೂ ಹೇಳಬಹುದು.

ಶ್ರೀ ಡಿ. ಟಿ. ಸೀತಾರಾಮರಾವ್.—ಈ ಸೇತುವೆಯ ಆವಶ್ಯಕತೆ ಇಷ್ಟೊಂದು ಅತುರ ವಾಗಿದೆಯೆಂದು ಗೊತ್ತಾದ ಮೇಲೆ ಅದಕ್ಕೆ top priorty ಕೊಟ್ಟು ಕಟ್ಟಿಸುವುದಕ್ಕೆ ಕೊಂದರೆ ಏನಿದೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಒಂದಾನೊಂದು ಕಾಲದಲ್ಲಿ ಇದರ ಆವಶ್ಯಕತೆ ಅಷ್ಟಾ ಗಿಲ್ಲವೆಂದು ಗೊತ್ತಾಗಿತ್ತು. ಬರುತ್ತ ಬರುತ್ತ ಬೇರೆ ಬೇರೆ ಕಾರಣಗಳಿಂದ ಅಲ್ಲಿ ಸಂಚಾರ ಜಾಸ್ತಿಯಾಗಿ, ಟ್ರಾಫ್ ಬಡಾವಣೆಯಾಗಬೇಕಾಗಿ ಬಂತು ಮತ್ತು ಹೊಳೆಯಿಂದ ಈಚೆಗೆ ಕಾರೇಜ್‌ಇದೆ, ಸಕ್ಕರೆ ಕಾರ್ಖಾನೆ ಪ್ರಾರಭವಾಗಿದೆ. ಇದಕ್ಕೆ ಕಬ್ಬಿನ ಗಾಡಿಗಳು ಹೋಗಬೇಕಾಗು ತ್ತದೆ, ಹೀಗೆ ಪರಿಸ್ಥಿತಿ ಬದಲಾಗಿರುವುದರಿಂದ ಇದರ ಆವಶ್ಯಕತೆ ಹೆಚ್ಚಾಗಿದೆ. ಹಿಂದೆ ನಡೆದು ಕೊಂಡು ಹೋಗತಕ್ಕ ಕಾಲುದಾರಿಸೇತುವೆ ಮಾಡಿದರೆ ಸಾಕು ಎಂದು ಕೇಳುತ್ತಿದ್ದರು. ಆದರೆ ಈಗ ಪಕ್ಕಾ ಸೇತುವೆಯಾಗಬೇಕಾಗಿದೆ. ಈಗ ಇರುವ ಹಳೆಯ ಸೇತುವೆ ಮುರಿದು ಹೋಗುವವರೆಗೂ ಹೊಸ ಸೇತುವೆ ಕೆಲಸ ತೆಗೆದುಕೊಳ್ಳಬಾರದೆಂದೇನು ಇಲ್ಲ. ಸರ್ಕಾರದ ಈ ಸೇತುವೆಯ ವಿಷಯವನ್ನು ತೀವ್ರಾನಕ್ತಿಯಿಂದ ಪರಿಶೀಲಿಸುತ್ತಾರೆಂದು ಹೇಳುತ್ತೇನೆ.

———

REPAIRS AND DESILTING OF MAJOR AND MINOR IRRIGATION TANKS IN SHIMOGA TALUK.

*Q—188. Smt. RATNAMMA MADHAVA RAO (Shimoga)—

Will the Government be pleased to state,

(*a*) the number of major and minor tanks in Shimoga taluk,

(Smt. RATNAMMA MADHAVA RAO)

(*b*) the number of major tanks for which repairs and desilting were carried out from the year 1958-1959 (yearwise figures may be given).

(*c*) the number of minor tanks for which repairs and desilting was carried out from the year 1958-1959 (yearwise figures may given)?

A.—Sri H. K. VEERANNA GOWDH (Minister for Public Works and Electricity).—

(*a*) Major tanks. 66
Minor tanks. 766.

(*b*) and (*c*) Repairs.—

Year	*Major tanks*	*Minor tanks*
1958-59	.. 4	20
1959-60	... 2	41
1960-61	... 8	39

No desilting work is carried out.

ಶ್ರೀಮತಿ ರತ್ನಮ್ಮ ಮಾಧವರಾವ್.—66 ದೊಡ್ಡ ಕೆರೆಗಳಲ್ಲಿ ಆರು ಕೆರೆ ಕೆಲಸವಾಗಿದೆ ಯೆಂದು ಹೇಳಿದೀರಿ, ಇನ್ನು ಎಷ್ಟಕ್ಕೆ ಅಂದಾಜು ತಯಾರಾಗಿದೆ?

†ಶ್ರೀ ಎಚ್. ಕೆ. ವೀರಣ್ಣಗೌಡ.—9 ದೊಡ್ಡಕೆರೆ ಮತ್ತು 575 ಸಣ್ಣ ಕೆರೆಗಳಿಗೆ ರಿಪೇರಿ ಮಾಡಬೇಕೆಂದಾಗಿದೆ ಈಗ ಒಂದು ದೊಡ್ಡ ಕೆರೆ ಕೆಲಸ ಮತ್ತು 40 ಸಣ್ಣ ಕೆರೆ ಕೆಲಸ ನಡೆಯುತ್ತಿದೆ.

ಶ್ರೀಮತಿ ರತ್ನಮ್ಮ ಮಾಧವರಾವ್.—ಮುಂಜೂರಾಗದೆ ಇರುವುದೆಷ್ಟು?

ಶ್ರೀ ಎಚ್. ಕೆ. ವೀರಣ್ಣಗೌಡ—ಎಲ್ಲ ಮುಂಜೂರಾಗಿದೆ ಕೆಲಸ ತೆಗೆದುಕೊಳ್ಳಬೇಕು.

ಶ್ರೀಮತಿ ರತ್ನಮ್ಮ ಮಾಧವರಾವ್.—ಒಡೆದಿರುವ ಕೆರೆಗಳೆಷ್ಟು?

ಶ್ರೀ ಎಚ್. ಕೆ. ವೀರಣ್ಣಗೌಡ.—9ದೊಡ್ಡ ಕೆರೆಗಳು ಮತ್ತು 575 ಸಣ್ಣ ಕೆರೆಗಳ ರಿಪೇರಿ ಮಾಡಬೇಕಾಗುತ್ತದೆ.

ಶ್ರೀಮತಿ ರತ್ನಮ್ಮ ಮಾಧವರಾವ್.—ಮಲೇನಾಡು ಅಭಿವೃದ್ಧಿ ಕಾಂಪ್ಲಿಲ್‌ನವರು ಪ್ರಪೋಸ್ ಮಾಡಿದ್ದರಲ್ಲಿ ಎಷ್ಟು ಆಗಿದೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ನೋಟಿಸ್ ಬೇಕು.

ಶ್ರೀ ಡಿ. ಟಿ. ಸೀತಾರಾಮರಾವ್.—ಇಇವೆಸ್ಟಿಗೇಷ್ಟ ಡಿವಿಷನ್‌ನವರು ಹೊಸದಾಗಿ ಇಇವೆಸ್ಟಿಗೇಟ್ ಮಾಡಿ ತೆಗೆದುಕೊಂಡಿರತಕ್ಕ ಕಾಮಗಾರಿಗಳು ಯಾವುವು?

ಶ್ರೀ ಎಚ್. ಕೆ. ವೀರಣ್ಣಗೌಡ.—ನನ್ನ ಮುಂದೆಯಿರುವ ರಿಕಾರ್ಡ್ ಪ್ರಕಾರ ಎಲ್ಲ ಅವರೇ ಮಾಡಿದ್ದು. ಇಇವೆಸ್ಟಿಗೇಷ್ಟ ಡಿವಿಷನ್‌ನವರು ಮಾಡದೆ ಯಾವ ಕೆರೆಯನ್ನು ತೆಗೆದು ಕೊಳ್ಳುವುದಕ್ಕಾಗುವುದಿಲ್ಲ. ಅವರ ರಿಪೋರ್ಟ್‌ನಲ್ಲಿ ಬಂದಿರುವ ಪ್ರಕಾರ 9 ದೊಡ್ಡಕೆರೆಗಳು ಮತ್ತು 575 ಸಣ್ಣ ಕೆರೆಗಳಿಗೆ ರಿಪೇರಿಮಾಡಬೇಕಾಗಿದೆ.